**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ</u>**

**<u>ನ್ಯಾಯಾಲಯ ಆಳಂದ</u>**

<u>ಸಿ.ಸಿ. ನಂಬರ 459 /2018</u> ಸಿ ಡಬ್ಲೂ.**1** ಪಿ.ಡಬ್ಲೂ. **1**

ದಿನಾಂಕಃ 06-03.2026

ಸತ್ಯ ಪ್ರತಿಜ್ಞೆಯ ಮೇರೆಗೆ

<u>ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ **ಶ್ರೀ ಎಸ್ ಎಸ್ ಸಿ** ವಕೀಲರಿಂದಃ</u>

ನಾನು ನನ್ನ ಮುಖ್ಯ ವಿಚಾರಣೆ ಸವಯದಲ್ಲಿ ಸಮಾರು 5-6 ವರ್ಷಗಳ ಹಿಂದೆ ಆರೋಪಿತರು ನೀರಿನ ಸಲುವಾಗಿ ಜಗಳ ಮಾಡಿ ನನಗೆ ಮತ್ತು ನನ್ನ ತಂದೆಯವರೆಗೆ ದಬ್ಬಾಳಿಕೆ ಮಾಡಿ ಅಂಜಿಕೆ ಹಾಕಿರುತ್ತಾರೆ ಎಂದು ಹೇಳಿದ್ದು ಸದರಿ ವಿಷಯವನ್ನು ಪೋಲಿಸರು ಮುಂದೆ ದೂರು ಸಲ್ಲಿಸುವಾಗಲು ಸಹಿತ ಹೇಳಿರುತ್ತೇನೆ. ಪಂಚಾಯಿತಿಯಾ ಚಾಸ-4 ರಿಂದ 6 ರವರ ಸಮಕ್ಷಮ ಯಾವ ತಾರೀಖಿನಂದು ಆಗಿತ್ತು ಎಂದು ಹೇಳಲು

ಬರುವುದಿಲ್ಲ. ಪಂಚಾಯಿತಿ ಆದ 2 ದಿನಗಳ ನಂತರ ದೂರನ್ನು ಸಲ್ಲಿಸಿರುತ್ತೇವೆ. ದೂರನ್ನು ಸಲ್ಲಿಸಲು ನಾನು ಒಬ್ಬನೇ ಪೋಲಿಸ ಠಾಣೆಗೆ ಹೋಗಿದ್ದೇನು.

2. ನಮ್ಮ ಜಮೀನು ಸರ್ವೆ ನಂ. 38 ಇದ್ದು 9 ಎಕರೆ 30 ಗುಂಟೆ ಇರುತ್ತದೆ. ಸದರಿ ಆಸ್ತಿಯು ಒಂದೇ ಆಸ್ತಿ ಇರುತ್ತದೆ ಎಂದರೆ ಸರಿ. ನನ್ನ ಜಮೀನಿನ ಪೂರ್ವಕ್ಕೆ ಸೀಮೆ ಇರುತ್ತದೆ. ಪಶ್ಚಿಮಕ್ಕೆ ಬಸವರಾಜ ಹಡಗಲಿ ಅವರ ಜಮೀನು ಇರುತ್ತದೆ. ದಕ್ಷಿಣಕ್ಕೆ ಸಿದ್ದಲಿಂಗ ಈರಣ್ಣ ಖಾಚಾಪೂರ ಅವರ ಜಮೀನು ಇರುತ್ತದೆ. ಉತ್ತರಕ್ಕೆ ದಾಮುಲು ರಾಠೋಡ ಅವರ ಜಮೀನು ಇರುತ್ತದೆ. ನಾನು ದೂರನ್ನು ನನ್ನ ಜಮೀನಿನ ಚೆಕ್ಕುಬಂದಿಯನ್ನು ತೋರಿಸಲು ಪೋಲಿಸರಿಗೆ ದಾಖಲೆಗಳನ್ನು ಅಂದರೆ ನಾಕಶೆಯನ್ನು ಕೊಟ್ಟಿದ್ದೆ ಆದರೆ ಅವರು ತೆಗೆದುಕೊಂಡಿರುವುದಿಲ್ಲ. ಸಾಮನ್ಯವಾಗಿ ನಕಾಶೆಯನ್ನು ನೋಡಿದರೆ ಯಾವ ಜಮೀನು ಯಾರ ಜಮೀನಿಗೆ ಹತ್ತಿಕೊಂಡು ಇರುತ್ತದೆ ಹೇಳಲು ಬರುತ್ತದೆ ಎಂದರೆ ಸರಿ. ಚಾಸ-2 ರಿಂದ 5 ರವರು ನಮ್ಮ ಊರಿನವರು ಎಂದರೆ ಸರಿ. ಸದರಿಯವರ ಜಮೀನುಗಳು ನಮ್ಮ ಜಮೀನಿನ ಅಕ್ಕ ಪಕ್ಕದಲ್ಲಿ ಇರುವುದಿಲ್ಲ ಎಂದರೆ ಸರಿ. ಚಾಸ-6ರವರ ಜಮೀನು ಸಹ ಅಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಚಾಸ-6ರವರ ಜಮೀನಿನ ಸರ್ವೆ ನಂಬರ ನನಗೆ ಗೊತ್ತಿಲ್ಲ. ಚಾಸ-2 ರಿಂದ 6ರವರು ನಮಗೆ ಬೇಕಾದವರು ಎಂದರೆ ಸರಿ. ಪೋಲಿಸರು ಬಂದಾಗ ಚಾಸ-2 ರಿಂದ 6ರವರು ಸಹ ಬಂದಿದ್ದರು. ಪಂಚನಾಮೆಯ ಸಮಯದಲ್ಲಿ ಪೋಲಿಸರು ಭಾವಚಿತ್ರವನ್ನು ತೆಗೆದಿರುವುದಿಲ್ಲ. ಭಾವಚಿತ್ರವನ್ನು ತೆಗೆಯದೇ ಸದರಿ ಜಮೀನು ಹಾಳಾಗಿದೇ ಎಂದು ಹೇಳಲು ಬರವುದಿಲ್ಲ ಎಂದರೆ ಸರಿಯಲ್ಲ. ನಾನು ಸಹ ಭಾವಚಿತ್ರಗಳನ್ನು ತೆಗೆದು ಪೋಲಿಸರಿಗೆ ಕೊಟ್ಟಿರುವುದಿಲ್ಲ. ಲಾಡ್ ಚಿಂಚೋಳ್ಳಿ ಸೀಮೆಯ ಜಮೀನುಗಳ ಇಳಿಜಾರು ಧುತ್ತರಗಾಂವ ಕಡೆಗೆ ಇರುತ್ತದೆ ಎಂದರೆ ಸಾಕ್ಷಿಯು ವಡ್ಡು ಇದ್ದು ಇಳಿಜಾರು ಇರುತ್ತದೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀಸವಾಲಿಗೆ ಸಮಾಯವಕಾಶ ಕೋರಿದ್ದರಿಂದ ನೀಡಲಾಯಿತು.**

ಓ.ಹೇ.ಕೆ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ. ಎಫ್.ಸಿ ಆಳಂದ